ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/06/ಇಸಿಎಸ್(1)/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು -560001
ದೂರವಾಣಿ ಸಂಖ್ಯೆ:080-2220777
ದಿನಾಂಕ: 19.11.2024

**ಸುತ್ತೋಲೆ**

ವಿಷಯ: ನವೆಂಬರ್/ಡಿಸೆಂಬರ್ 2024ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಬಗ್ಗೆ ಮಾಹಿತಿ

ಉಲ್ಲೇಖ: 1) ಈ ಕಛೇರಿ ಸುತ್ತೋಲೆ ಸಂಖ್ಯೆ:DTE-ADMIOACM2/45/2024 ದಿ:19.10.2023
2) ಈ ಕಛೇರಿ ಜ್ಞಾಪನ ಸಂಖ್ಯೆ:ಬಿಟಿಇ/06/ಇಸಿಎಸ್(1)/2024 ದಿ:23.10.2024
3) ಈ ಕಛೇರಿ ಜ್ಞಾಪನ ಸಂಖ್ಯೆ:ಬಿಟಿಇ/06/ಇಸಿಎಸ್(1)/2024 ದಿ:24.10.2024
4) ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/06/ಇಸಿಎಸ್(1)/2024 ದಿ:07.11.2024
5) ಈ ಕಛೇರಿ ಜ್ಞಾಪನ ಸಂಖ್ಯೆ:ಬಿಟಿಇ/06/ಇಸಿಎಸ್(1)/2024 ದಿ:08.11.2024
6) ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/07/ಇಪಿಎಸ್/2024 ದಿ:19.11.2024

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸುತ್ತೋಲೆಯನ್ವಯ ನವೆಂಬರ್/ಡಿಸೆಂಬರ್ 2024ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಯ ಕುರಿತು ವಿವಿಧ ಹಂತದ ಪರೀಕ್ಷಾ ಕಾರ್ಯಗಳಿಗೆ ನಿಗದಿಪಡಿಸಲಾಗಿದ್ದ ದಿನಾಂಕಗಳನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ಕೆಳಗಿನಂತೆ ಮರುನಿಗದಿಪಡಿಸಲಾಗಿದೆ. ಸಂಬಂಧಪಟ್ಟ ಉಪನ್ಯಾಸಕರು/ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳ ಗಮನಕ್ಕೆ ತಪ್ಪದೇ ತರುವಂತೆ ತಿಳಸಲಾಗಿದೆ.

| | | |
|---|---|---|
| 1 | ಪ್ರಸಕ್ತ ಶೈಕ್ಷಣಿಕ ಸಾಲಿನ 1, 3 ಮತ್ತು 5 ನೇ ಸೆಮಿಸ್ಟರ್ ತರಗತಿಗಳ ಶೈಕ್ಷಣಿಕ ಅವಧಿಯ ಮುಕ್ತಾಯ | **ದಿನಾಂಕ:09.11.2024** |
| 2 | ಪ್ರಾಯೋಗಿಕ ಪರೀಕ್ಷೆಗಳ ಪ್ರಾರಂಭ | **ದಿನಾಂಕ: 22.11.2024** |
| 3 | C-15 ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಥಿಯರಿ ಪರೀಕ್ಷೆಗಳ ಪ್ರಾರಂಭ | **ದಿನಾಂಕ:25.11.2024** |
| 4 | C-20 ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಥಿಯರಿ ಪರೀಕ್ಷೆಗಳ ಪ್ರಾರಂಭ | **ದಿನಾಂಕ:03.12.2024** |
| 5 | ಉಲ್ಲೇಖ (2)ರ ಜ್ಞಾಪನದಲ್ಲಿನ ಸೂಚನೆಗಳನ್ವಯ ಸಂಸ್ಥೆಗಳಲ್ಲಿ ವಿಭಾಗಾಧಿಕಾರಿಗಳು & ಪ್ರಾಂಶುಪಾಲರಿಂದ ಪರಿಶೀಲಿಸಲ್ಪಟ್ಟ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ಪ್ರಿನ್ಸಿಪಾಲರ ಲಾಗಿನ್ ಮೂಲಕ ಅಪ್‌ಲೋಡ್ ಮಾಡುವುದು | **ಪ್ರವೇಶ ಪತ್ರಗಳನ್ನು ಮುದ್ರಿಸುವ ಮೊದಲು** |
| 6 | ಪ್ರಾಯೋಗಿಕ ಪರೀಕ್ಷಕರ ಪಟ್ಟಿಯನ್ನು ಆನ್‌ಲೈನ್‌ನಲ್ಲಿ(BTELinx) ಪಾಲಿಟೆಕ್ನಿಕ್‌ಗಳಿಗೆ ಕಳುಹಿಸುವುದು | **ದಿನಾಂಕ:21.11.2024** |
| 7 | ಸಂಸ್ಥೆಗಳು ಆನ್ ಲೈನ್‌ನಲ್ಲಿ (BTELinx) ಪ್ರವೇಶ ಪತ್ರಗಳನ್ನು ಮುದ್ರಿಸುವುದು | **ದಿನಾಂಕ:20.11.2024 ರಿಂದ** |

ಉಲ್ಲೇಖ (2)ರ ಈ ಕಛೇರಿ ಜ್ಞಾಪನದಲ್ಲಿ ನೀಡಿರುವ ಸೂಚನೆಗಳನ್ವಯ ಪ್ರಾಂಶುಪಾಲರು ಪರಿಶೀಲಿಸಿ ದೃಢೀಕರಿಸಿದ ಮತ್ತು ವಿದ್ಯಾರ್ಥಿಗಳು ಸಹಮತಿಸಿದ ಆಂತರಿಕ ಅಂಕಗಳನ್ನು ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಕಾಲ ಕಾಲಕ್ಕೆ ನೀಡುವ ಸೂಚನೆಗಳನ್ವಯ HOD/PPL Login ನಲ್ಲಿ Upload ಮಾಡಲು ತಿಳಸಲಾಗಿದೆ.

ಉಲ್ಲೇಖ (3) ರ ಜ್ಞಾಪನದಂತೆ ಸಂಸ್ಥೆಗೆ ನಿಯೋಜನೆಗೊಂಡ ಆಂತರಿಕ ಅಂಕಗಳ ಪರಿವೀಕ್ಷಕರು ಚೆಕ್‌ಲಿಸ್ಟ್ ಅನ್ವಯ ಆಂತರಿಕ ಅಂಕಗಳಿಗೆ ಸಂಬಂಧಪಟ್ಟ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ಆಂತರಿಕ ಅಂಕಗಳನ್ನು ದೃಢೀಕರಿಸುವರು. ತದನಂತರ ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್ ನಿಂದ ಡೌನ್‌ಲೋಡ್ ಮಾಡಿದ ಮುದ್ರಿತ ಪ್ರತಿಯಲ್ಲಿನ ಅಂಕಗಳೊಂದಿಗೆ ಮತ್ತು ಬಿಟಿಇಲಿಂಕ್ಸ್ ವೆಬ್‌ಪೋರ್ಟಲ್ ಆನ್‌ಲೈನ್ ನಲ್ಲಿ ಆಂತರಿಕ ಅಂಕಗಳನ್ನು ಮೂಲ ಆಂತರಿಕ ಅಂಕಗಳ ವಹಿಯಲ್ಲಿನ ದೃಢೀಕೃತ ಅಂಕಗಳೊಂದಿಗೆ ಕೂಡ ಪರಿಶೀಲಿಸುವರು.

ಉಲ್ಲೇಖ (4) ರ ಸುತ್ತೋಲೆಯಂತೆ ನವೆಂಬರ್ / ಡಿಸೆಂಬರ್ 2024 ರ ಡಿಪ್ಲೋಮ ಸೆಮಿಸ್ಟರ್ C-15 ಪಠ್ಯಕ್ರಮದ ಥಿಯರಿ ಪರೀಕ್ಷೆಗಳಿಗೆ ಸರ್ಕಾರಿ ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡುವುದು.

ಉಲ್ಲೇಖ (5) ರ ಜ್ಞಾಪನದನ್ವಯ ನವೆಂಬರ್/ಡಿಸೆಂಬರ್ 2024 ರ ಪ್ರಾಯೋಗಿಕ ಪರೀಕ್ಷೆಗಳನ್ನು ಸಮರ್ಪಕವಾಗಿ ನಡೆಸಲು ಹೆಚ್ಚುವರಿ/ ಬದಲಿಯಾಗಿ ಪರೀಕ್ಷಕರನ್ನು ಪಡೆಯಬಹುದಾಗಿದೆ.

ಉಲ್ಲೇಖ (6) ರ ಸುತ್ತೋಲೆಯಲ್ಲಿನ ಕಾಲಂ(2) ರಲ್ಲಿ ಕಾಣಿಸಿರುವ ಪಾಲಿಟೆಕ್ನಿಕ್‌ಗಳು ನವೆಂಬರ್/ಡಿಸೆಂಬರ್ 2024 ರ ಡಿಪ್ಲೋಮ ಸೆಮಿಸ್ಟರ್ C-20 ಪಠ್ಯಕ್ರಮದ ವಿದ್ಯಾರ್ಥಿಗಳು ಕಾಲಂ (3) ರಲ್ಲಿ ಸೂಚಿಸಿರುವ ಪಾಲಿಟೆಕ್ನಿಕ್‌ಗಳಲ್ಲಿ ಥಿಯರಿ ಪರೀಕ್ಷೆಗಳನ್ನು ಬರೆಯಲು ವ್ಯವಸ್ಥೆ ಮಾಡಲು ತಿಳಿಸಲಾಗಿದೆ.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:
ರಾಜ್ಯದ ಎಲ್ಲಾ ಸರ್ಕಾರಿ/ ಖಾಸಗಿ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ - ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

ಪ್ರತಿ:
1. ನಿರ್ದೇಶಕರ ಆಪ್ತಶಾಖೆ
2. ಇಸಿಎಸ್/ಇಎಫ್‌ಎಸ್/ಇಎಪಿ/ಇಆರ್‌ಎಸ್ ವಿಭಾಗಗಳಿಗೆ
3. ಇ ಗವರ್ನೆನ್ಸ್ ವಿಭಾಗಕೆ
4. ಕಾರ್ಯದರ್ಶಿಯವರ ಆಪ್ತ ಶಾಖೆ